**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 08-05-1969.**

(ओम शान्ति,  बापदादा. अव्यक्त मुरली 08-05-1969)

***ಮನ, ವಚನ, ಕರ್ಮಗಳನ್ನು ಸರಿಪಡಿಸಿ ಕೊಳ್ಳುವ ಯುಕ್ತಿ***

(मंसा वाचा कर्मणा को ठीक करने की युक्ति)

ಇಂದು ತಂದೆ ಒಂದು ವಿಶೇಷ ಕಾರ್ಯಕ್ಕಾಗಿ ಬಂದಿದ್ದಾರೆ. ಇಲ್ಲಿ ಕುಳಿತಿರುವವರೆಲ್ಲರೂ ತಮ್ಮನ್ನು ತಾವು ನಿಶ್ಚಯ ಬುದ್ಧಿಯವರೆಂದು ತಿಳಿಯುತ್ತಿರಾ? ನಂಬರವಾರ್ ಇದ್ದಾರೆ. ಭಲೆ ನಂಬರವಾರ್ ಇದ್ದಾರೆ ಆದರೆ ನಿಶ್ಚಯ ಬುದ್ಧಿಯವರಾಗಿದ್ದೀರಾ? ನಿಶ್ಚಯ ಬುದ್ದಿಯವರು ಎಂಬ ಬಿರುದು ಕೊಡಬಹುದೇ? ನಿಶ್ಚಯದಲ್ಲಿ ನಂಬರ್ ಇರುತ್ತದೆಯೇ ಅಥವಾ ಪುರುಷಾರ್ಥದಲ್ಲಿ ನಂಬರ್ ಇರುತ್ತದೆಯೇ? ನಿಶ್ಚಯದಲ್ಲಿ ಪ್ರತಿಶತ (%) ಇರುವುದಿಲ್ಲ, ನಿಶ್ಚಯದಲ್ಲಿ ನಂಬರವಾರ ಇರುವುದಿಲ್ಲ. ಪುರುಷಾರ್ಥದ ಸ್ಥಿತಿಯಲ್ಲಿ ನಂಬರ್ ಇರಬಹುದು. ನಿಶ್ಚಯ ಬುದ್ಧಿಯಲ್ಲಿ ನಂಬರ್ ಇರುವುದಿಲ್ಲ, ನಿಶ್ಚಯ ಇಲ್ಲವೇ ಸಂಶಯ. ನಿಶ್ಚಯದಲ್ಲಿ ಒಂದು ವೇಳೆ ಮನದಲ್ಲಾಗಲಿ, ಮಾತಿನಲ್ಲಾಗಲಿ ಅಥವಾ ಕರ್ಮದಲ್ಲಿ ಸ್ವಲ್ಪ ಸಂಶಯವಿದ್ದರೆ, ಮನಸ್ಸಿನ ಒಂದೇ ಸಂಕಲ್ಪ ಸಂಶಯದ್ದಾಗಿದ್ದರೆ ಸಂಶಯ ಬುದ್ಧಿ ಎನ್ನಲಾಗುವುದು. ಈ ರೀತಿಯ ನಿಶ್ಚಯ ಬುದ್ಧಿಯಿಂದ ಎಲ್ಲರೂ ಇದ್ದೀರಾ? ನಿಶ್ಚಯ ಬುದ್ಧಿಯ ಮುಖ್ಯ ಪರಿಶೀಲನೆ ಯಾವುದಾಗಿದೆ? ತಮ್ಮೆದುರಿಗೆ ಯಾರೇ ಹೊಸಬರು ಬಂದರೆ ಅವರ ಬಗೆಗೆ ಏನೂ ಗೊತ್ತಿಲ್ಲದಿದ್ದಾಗ ಅವರನ್ನು ಹೇಗೆ ಪರಿಶೀಲಿಸುವಿರಿ? ಕಂಪನಗಳಿಂದ(ವೈಬ್ರೇಶನ್). ಯಾವ ಪ್ರಕಂಪನಗಳಿಂದ (Vibration) ಪರೀಕ್ಷಿಸುವಿರಿ? ಈಗ ಇದರ ಅಭ್ಯಾಸವನ್ನು ಮಾಡಬೇಕು ಏಕೆಂದರೆ ವರ್ತಮಾನ ಸಮಯ ಬಹಳ ಪ್ರಜೆಗಳು ಬರುವರು. ಪ್ರಜೆಗಳು ಮತ್ತು ಸಮೀಪದವರನ್ನು ಗುರುತಿಸಲು ಬಹಳಷ್ಟು ಪರಿಶೀಲಿಸುವ ಅಭ್ಯಾಸ ಬೇಕು. ಪರಿಶೀಲನೆಯ ಮುಖ್ಯ ವಿಷಯ - ಅವರ ಕಣ್ಣುಗಳಿಂದ ಯಾವುದೋ ಗುರಿಯ ಕಡೆ ಗಮನವಿಟ್ಟ ಹಾಗೆ ಅನುಭವವಾಗುತ್ತದೆ. ಬಾಣ ಬಿಡುವ ಅಥವಾ ಗುರಿಯಿಡುವ ಸೈನಿಕರು ಪೂರ್ಣ ಗುರಿಯೆಡೆ ಗಮನವಿಟ್ಟಿರುತ್ತಾರೆ. ಅವರ ಕಣ್ಣು, ವೃತ್ತಿ ಆ ಸಮಯದಲ್ಲಿ ಒಂದೇ ಕಡೆಗೆ ಇರುವುದು. ಅದೇ ರೀತಿ ನಿಶ್ಚಯ ಬುದ್ಧಿಯಲ್ಲಿ ಯಾರು ಪಕ್ಕಾ ಇರುವರೋ ಅವರ ಮುಖದಿಂದ ಗುರಿಯಿಟ್ಟವರಂತೆ ಅನುಭವವಾಗುವುದು. ಒಂದೇ ಗುರಿಯೆಡೆಗೆ ನೋಡಿ ಎಂದರೆ ಬಿಂದುವನ್ನು ನೋಡಿ ಎಂದು ತಮ್ಮೆಲ್ಲರಿಗೂ ಮುಖ್ಯ ಶಿಕ್ಷಣ ಸಿಕ್ಕಿದೆ. ಬಿಂದುವನ್ನು ನೋಡುವುದು ಎಂದರೆ ಗುರಿಯನ್ನು ನೋಡುವುದು, ಆದ್ದರಿಂದ ನಿಶ್ಚಯ ಬುದ್ಧಿಯವರ ಲಕ್ಷಣವೇನು? ಪೂರ್ಣ ಗುರಿ. ಗುರಿ ಸ್ವಲ್ಪ ಅಲುಗಾಡಿದರೆ ಸೋಲಾಗುತ್ತದೆ. ನಿಶ್ಚಯ ಬುದ್ಧಿಯವರ ಕಣ್ಣುಗಳಿಂದ ನೋಡುತ್ತಿದ್ದರೂ, ಬೇರೆ ಏನನ್ನೋ ನೋಡುತ್ತಿದ್ದಾರೆಂದು ಅನುಭವವಾಗುತ್ತದೆ. ಅವರ ಮಾತುಗಳೂ ಹಾಗೆಯೇ ಇರುವವು. ಇವು ನಿಶ್ಚಯ ಬುದ್ಧಿಯವರ ಲಕ್ಷಣಗಳು. ಗುರಿಯಿಟ್ಟವನ ಸ್ಥಿತಿ ನಶೆಯದಾಗಿರುತ್ತದೆ, ಅದೇ ರೀತಿ ಗುರಿ ಮತ್ತು ಅವರ ನಶೆಯ ಸ್ಥಿತಿಯಿಂದ ನಿಶ್ಚಯ ಬುದ್ಧಿಯವರನ್ನು ಗುರುತಿಸಬಹುದು. ಈ ಅಭ್ಯಾಸವನ್ನು ಈಗ ಮಾಡಿ, ನಂತರ ನಮ್ಮ ಪರಶೀಲನೆ ಸರಿಯಾಗಿತ್ತೇ ಎಂದು ನಿರ್ಣಯ ಮಾಡಿ, ಅಭ್ಯಾಸ ಮಾಡುತ್ತಾ ಪರಿಶೀಲನೆ ಯಥಾರ್ಥವಾಗುವುದು. ದೃಷ್ಟಿಯಲ್ಲಿ ಸೃಷ್ಟಿಯೆಂದು ಹೇಳುತ್ತಾರಲ್ಲವೇ, ಅಂತೆಯೇ ತಾವು ಅವರ ದೃಷ್ಟಿಯಿಂದ ಪೂರ್ಣ ಸೃಷ್ಟಿಯನ್ನು ತಿಳಿಯುವಿರಿ.

ಮನ-ವಚನ-ಕರ್ಮಗಳನ್ನು ಸರಿಯಾಗಿಟ್ಟುಕೊಳ್ಳಲು ಕೇವಲ ಮೂರು ಅಕ್ಷರಗಳನ್ನು ನೆನಪಿಟ್ಟುಕೊಳ್ಳಿ. ಈ ಮೂರು ಅಕ್ಷರಗಳು ಪ್ರತಿದಿನದ ಮುರಳಿಯಲ್ಲಿಯೂ ಬರುತ್ತವೆ. ಆ ಮೂರು ಅಕ್ಷರಗಳು ಯಾವವು? **ಮನಕ್ಕಾಗಿ ನಿರಾಕಾರಿ, ವಚನಕ್ಕಾಗಿ ನಿರಹಂಕಾರಿ ಮತ್ತು ಕರ್ಮಕ್ಕಾಗಿ ನಿರ್ವಿಕಾರಿ**, ಮಾತು ಮತ್ತು ಕೃತಿ ದೇವತೆಗಳ ಪ್ರಮಾಣವಾಗಿವೆಯಲ್ಲವೇ? ಆದ್ದರಿಂದ ನಿರಾಕಾರಿ, ನಿರಹಂಕಾರಿ ಮತ್ತು ನಿರ್ವಿಕಾರಿ, ಈ ಮೂರು ಮಾತುಗಳನ್ನು ಒಂದು ವೇಳೆ ನೆನಪಿಟ್ಟುಕೊಂಡರೆ ಮನ-ವಚನ-ಕರ್ಮಗಳು ಬಹಳ ಶ್ರೇಷ್ಠವಾಗುವವು. ಎಷ್ಟು ನಿರಾಕಾರಿ ಸ್ಥಿತಿಯಲ್ಲಿರುವಿರೋ ಅಷ್ಟೇ ನಿರಹಂಕಾರಿ ಮತ್ತು ನಿರ್ವಿಕಾರಿಗಳಾಗುವಿರಿ. ವಿಕಾರದ

ಯಾವುದೇ ರೀತಿಯ ದುರ್ಗಂಧ ಇರುವುದಿಲ್ಲ. ಇದು ಮುಖ್ಯ ಪುರುಷಾರ್ಥವಾಗಿದೆ. ಈ ಮೂರು ಮಾತುಗಳನ್ನು ನೆನಪಿಟ್ಟುಕೊಂಡಾಗ ಯಾವ ರೀತಿ ತಯಾರಾಗುತ್ತೀರಿ? ತ್ರಿಕಾಲದರ್ಶಿಗಳು ಮತ್ತು ಭವಿಷ್ಯದಲ್ಲಿ ವಿಶ್ವದ ಮಾಲೀಕರು ಆಗುವಿರಿ. ಈಗ ತ್ರಿಲೋಕಿನಾಥ ಮತ್ತು ತ್ರಿಕಾಲದರ್ಶಿ ಆಗುವಿರಿ, ತ್ರಿಲೋಕಿನಾಥದ ಅರ್ಥವನ್ನು ತಿಳಿದಿದ್ದೀರಲ್ಲವೇ? ಯಾರು ಮೂರು ಲೋಕಗಳ ಜ್ಞಾನವನ್ನು ಸ್ಮರಣೆ ಮಾಡುತ್ತಾರೋ ಅವರೇ ತ್ರಿಲೋಕಿನಾಥ ಏಕೆಂದರೆ ತಂದೆಯ ಜೊತೆಗೆ ತಾವೆಲ್ಲ ಮಕ್ಕಳೂ ಇದ್ದೀರಿ. ಒಳ್ಳೆಯದು.

ಅವ್ಯಕ್ತ ಮುರಳಿ 08-05-1969.

**ಮನ, ವಚನ, ಕರ್ಮಗಳನ್ನು ಸರಿಪಡಿಸಿಕೊಳ್ಳುವ ಯುಕ್ತಿಗಳು.**

ಆತ್ಮಿಕ ಸ್ಥಿತಿಯಲ್ಲಿ ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ನನ್ನ ಲಕ್ಷ್ಯ ಮತ್ತು ನನ್ನ ಸ್ಥಿತಿಯ ನಶೆಯಿಂದ ಇರುವ ನಿಶ್ಚಯ ಬುದ್ಧಿ ಸ್ವರೂಪ.

2. ನಾನು ನಿರಾಕಾರ ಸ್ಥಿತಿಯಲ್ಲಿ ಮನಸ್ಸನ್ನು, ನಿರಹಂಕಾರ ಸ್ಥಿತಿಯಲ್ಲಿ ಮಾತನ್ನು, ನಿರ್ವಿಕಾರಿ ಸ್ಥಿತಿಯಲ್ಲಿ ಕರ್ಮವನ್ನು ಸರಿಪಡಿಸಿಕೊಂಡಿದ್ದೇನೆ.

3. ನನ್ನ ನಿರಹಂಕಾರಿ ಮಾತಿನಿಂದ, ನಿರ್ವಿಕಾರಿ ಕರ್ಮಗಳಿಂದ ನನ್ನ ದೈವೀಗುಣಗಳು ಪ್ರತ್ಯಕ್ಷವಾದವು.

4. ನಾನು ನಿರಾಕಾರಿ, ನಿರಹಂಕಾರಿ ಮತ್ತು ನಿರ್ವಿಕಾರಿ ಈ ಮೂರು ವಿಷಯಗಳನ್ನು ನೆನಪಿಟ್ಟಿರುವ ತ್ರಿಕಾಲದರ್ಶಿ.

5. ನಾನು ಮೂರು ಲೋಕಗಳ ಜ್ಞಾನವನ್ನು ಸ್ಮರಣೆ ಮಾಡುವ ತ್ರಿಲೋಕಿನಾಥನು.

**ಹೆಚ್ಚಿನ ಮಾಹಿತಿಗಾಗಿ.**

1. ಮನಸಾ, ವಾಚ, ಕರ್ಮಣಾದ ಬಗ್ಗೆ : ಅವ್ಯಕ್ತ ಮುರಳಿ ( 11-05-1983 : ಯುವಕರ ಜೊತೆಗೆ ಅವ್ಯಕ್ತ ಬಾಪ್ ದಾದ.

30-03-1985 : ಮೂರು, ಮೂರು ವಿಷಯಗಳ ಪಾಠ).

2. ತ್ರಿಕಾಲ ದರ್ಶಿ ಮತ್ತು ತ್ರಿಲೋಕಿನಾಥ : ಅವ್ಯಕ್ತ ಮುರಳಿ 18-09-1969 : ತ್ರಿನೇತ್ರಿ, ತ್ರಿಕಾಲದರ್ಶಿ, ತ್ರಿಲೋಕಿನಾಥರಾಗುವ ಯುಕ್ತಿಗಳು.

3. ನಿರಾಕಾರ ಸ್ಥಿತಿ : ಅವ್ಯಕ್ತ ಮುರಳಿ ( 28-07-1971 : ಆಕಾರದಲ್ಲಿ ನಿರಾಕಾರನನ್ನು ನೋಡುವ ಅಭ್ಯಾಸ.

25-01-1974 : ನಿರಾಕಾರ ಸ್ವರೂಪ ಸ್ಮೃತಿಯಲ್ಲಿರುವುದು ಹಾಗೂ ಆನಂದರಸವನ್ನು ತೆಗೆದುಕೊಳ್ಳುವ ಸಹಜ ವಿಧಿ.

3. ದೃಷ್ಟಿಯಿಂದ ಸೃಷ್ಟಿ : ಅವ್ಯಕ್ತ ಮುರಳಿ ( 18-06-1969 : ಮರುಜೀವ ಜನ್ಮದ ಗುರುತುಗಳು.

06-08-970 : ದೃಷ್ಟಿಯಿಂದ ಸೃಷ್ಟಿಯ ರಚನೆ.

18-07-1974 : ಸಂಪೂರ್ಣ ಪವಿತ್ರ ದೃಷ್ಟಿ ಹಾಗೂ ವೃತ್ತಿಯಿಂದ ಶ್ರೇಷ್ಠ ಅದೃಷ್ಟದ ರಚನೆ.

24-10-1971 : ದೃಷ್ಟಿಯಿಂದ ಪರಿವರ್ತಿಸುವ ವಿಧಿ).